ಆಯ್ಕೆಗಳಿವೆ.

ಈಗ ತಮಗೆ ತಕ್ಕ ಹಾಗೇ ಕಸ್ಟಮೈಸ್ ಮಾಡಿಕೊಳ್ಳುವವರ ಸಂಖ್ಯೆಯೂ ದ್ವಿಗುಣವಾಗಿದೆ. ಸೆಲೆಬ್ರಿಟಿಗಳಾದ ದಿಯಾ ಮಿರ್ಜಾ, ಅನುಷ್ಕಾ ಶರ್ಮಾ, ದೀಪಿಕಾ ಪಡುಕೋಣೆ ಮುಂತಾದವರು ವಿವಿಧ ವಿನ್ಯಾಸದ ಮೆಟರ್ನಿಟಿ ಉಡುಪುಗಳನ್ನು ಧರಿಸಿ ಹೆಂಗಳೆಯರ ಕಣ್ಮನ ಸೆಳೆದಿದ್ದಾರೆ.

## ಫೀಡಿಂಗ್ ಮ್ಯಾಕ್ಸಿ

ಇದು ಹಾಲುಣಿಸುವ ತಾಯಂದಿರಿಗೆ ಆರಾಮದಾಯಕವಾದ ಉಡುಪು. ಎದೆಯ ಭಾಗದ ಬಳಿ ಉಡುಪಿನ ಬಣ್ಣದಲ್ಲಿಯೇ ಜಿಪ್ ನೀಡಿರುವುದರಿಂದ ಯಾವುದೇ ಕಿರಿಕಿರಿಯಿಲ್ಲದೆ ಇದನ್ನು ಧರಿಸಬಹುದು. ಪಾರ್ಟಿ, ಫಂಕ್ಷನ್‌ಗಳಿಗೂ ಇದನ್ನು ಹಾಕಿಕೊಂಡು ಹೋಗಬಹುದು. ಚಂಕಿ ಕಿವಿಯೋಲೆ ಹಾಗೂ ಆರಾಮದಾಯಕವಾದ ಫ್ಲ್ಯಾಟ್ ಚಪ್ಪಲಿಗಳು ತಾಯ್ತನದ ಸವಿಯ ಜೊತೆಗೆ ಫ್ಯಾಷನ್ ಸೆನ್ಸ್ ಅನ್ನು ಎಂಜಾಯ್ ಮಾಡಲು ಸಹಾಯ ಮಾಡಬಹುದು.

## ವೆಸ್ಟರ್ನ್ ಡ್ರೆಸ್

ಸ್ಟೈಲಿಷ್ ಲುಕ್ ಬೇಕು ಎನ್ನುವವರು ಈ ವೆಸ್ಟರ್ನ್ ಫೀಡಿಂಗ್ ಡ್ರೆಸ್ ಆಯ್ಕೆ ಮಾಡಿಕೊಳ್ಳಬಹುದು. ಇದು ನೋಡುವುದಕ್ಕೆ ಟ್ರೆಂಡಿಂಗ್ ಆಗಿ ಇರುತ್ತದೆ. ಕಾಟನ್ ಬಟ್ಟೆಯಿಂದ ಇದನ್ನು ಮಾಡಿರುವುದರಿಂದ ಮಗುವಿಗೂ ಕಿರಿಕಿರಿ ಆಗಲ್ಲ. ಹಾಗೇ ಹಾಲುಣಿಸುವುದಕ್ಕೆ ಸುಲಭವಾಗಿರುತ್ತದೆ. ಪಾರ್ಟಿ, ಔಟಿಂಗ್‌ಗೆ ಹೋಗುವಾಗ ಇದನ್ನು ಧರಿಸಬಹುದು. ಮೆಸ್ಸಿ ಬನ್, ಸ್ನಿಕರ್ಸ್ ಹಾಕಿಕೊಂಡರೆ ಲುಕ್ ಮತ್ತಷ್ಟೂ ಚೆನ್ನಾಗಿರುತ್ತದೆ.

## ಅನಾರ್ಕಲಿ ಡ್ರೆಸ್

ಈ ಅನಾರ್ಕಲಿ ಡ್ರೆಸ್ ಕೂಡ ಹಾಲುಣಿಸುವ ತಾಯಂದಿರ ಫ್ಯಾಷನ್‌ಗೆ ತುಂಬಾ ಚೆನ್ನಾಗಿ ಒಪ್ಪುತ್ತದೆ. ಹಬ್ಬದ ಸಮಯದಲ್ಲಿ ಸೀರೆ ಉಡುವುದರ ಬದಲು ಈ ಅನಾರ್ಕಲಿ ಉಡುಪು ತಾಯಂದಿರಿಗೆ ಕಂಫರ್ಟ್ ಹಾಗೂ ಮಗುವಿಗೆ ಹಾಲುಣಿಸುವುದಕ್ಕೆ ಸೂಕ್ತವಾಗಿದೆ. ಡಿಸ್ಕ್ರೀಟ್ ಜಿಪ್ಪರ್‌ಗಳಿರುವಂತಹ ಡ್ರೆಸ್ ಕೂಡ ತಾಯಂದಿರಿಗೆ ಸೂಕ್ತವಾಗಿದೆ. ಈ ದಿರಿಸಿನ ಎದೆಭಾಗದಲ್ಲಿ ಹಾಗೂ ತೋಳುಗಳ ಕೆಳಗಡೆ ಜಿಪ್ ಇರುವುದರಿಂದ ಯಾವುದೇ ಮುಜುಗರ, ಕಿರಿಕಿರಿಯಿಲ್ಲದೆ ಮಗುವಿಗೆ ಹಾಲುಣಿಸಬಹುದು.

ಕ್ಲಾಸಿಕ್ ರಾಪ್ ಮತ್ತು ಕ್ರಾಸ್ ಓವರ್ ಉಡುಪುಗಳು ತಾಯಂದಿರಿಗೆ ಸೂಕ್ತವಾದ ದಿರಿಸಾಗಿವೆ. ಕೆಲವರು ಜಿಪ್ ಇರುವ ದಿರಿಸುಗಳು ಅಷ್ಟಾಗಿ ಇಷ್ಟಪಡುವುದಿಲ್ಲ. ಅಂಥವರು ಈ ಡಬಲ್ ಲೇಯರ್ ಮತ್ತು ಲಿಫ್ಟ್‌ಅಪ್ ಪ್ಯಾನಲ್‌ಗಳು ಇರುವಂತಹ ಡ್ರೆಸ್ ಆಯ್ಕೆ ಮಾಡಿಕೊಳ್ಳಬಹುದು. ಇದು ಹಾಲುಣಿಸುವುದಕ್ಕೆ ಸೂಕ್ತವಾಗಿರುತ್ತದೆ. ನೋಡುವುದಕ್ಕೂ ಟ್ರೆಂಡಿಯಾಗಿರುತ್ತದೆ. ಹಾಗೇ ಬಟನ್ ಮತ್ತು ಸ್ನ್ಯಾಪ್‌ಗಳಿರುವಂತಹ ಬಟ್ಟೆ ಹಾಗೂ ಈಗ ಸಖತ್ ಟ್ರೆಂಡಿಂಗ್‌ನಲ್ಲಿದೆ. ಬಟನ್‌ಗಳಿರುವ ಶರ್ಟ್ ರೀತಿಯ ಉಡುಪುಗಳು ಅಥವಾ ಸ್ನ್ಯಾಪ್‌ಗಳು ಹಾಲುಣಿಸುವ ತಾಯಂದಿರಿಗೆ ಆರಾಮದಾಯಕ. ಇದನ್ನು ಪಾರ್ಟಿ, ಫಂಕ್ಷನ್‌ಗಳಿಗೆ ಕೂಡ ಯಾವುದೇ ಮುಜುಗರ, ಕಿರಿಕಿರಿ ಇಲ್ಲದೆ ಧರಿಸಿಕೊಂಡು ಹೋಗಬಹುದು.

ಕಫ್ತಾನ್‌ಗಳು ಕೂಡ ಹಾಲುಣಿಸುವ ತಾಯಂದಿರಿಗೆ ಹೇಳಿಮಾಡಿಸಿದ ಡ್ರೆಸ್ ಎಂದು ಹೇಳಬಹುದು.ಇದು ಸ್ಟೈಲಿಷ್ ಲುಕ್ ನೀಡುತ್ತದೆ.

ರೇಸರ್ ಬ್ಯಾಕ್ ಡ್ರೆಸ್

ಇದು ಹಾಲುಣಿಸುವ ತಾಯಂದಿರಿಗಾಗಿಯೇ ತಯಾರಿಸಿದ ಉಡುಗೆ. ಧರಿಸುವುದಕ್ಕೆ ಕೂಡ ತುಂಬಾ ಅನುಕೂಲಕರವಾಗಿದೆ.

ತಾಯಂದಿರು ಹಾಲುಣಿಸಿದ ಮೇಲೆಯೂ ಹಾಲು ಸೋರಿಕೆ ಉಂಟಾಗಬಹುದು. ಇದನ್ನು ತಡೆಯಲು ಶುಶ್ರೂಷಾ ಪ್ಯಾಡ್ ಇರುವ ಬ್ಲೌಸ್ ಧರಿಸಬಹುದು.

ಬೆಲ್ಲಿ ಬ್ಯಾಂಡಿಟ್‌ನಂತಹ ಬ್ರಾಂಡ್ ಆರಾಮದಾಯಕ ಬಟ್ಟೆ ಮತ್ತು ಸುಲಭ ಶುಶ್ರೂಷಾ ಉಡುಪುಗಳನ್ನು ನೀಡುತ್ತವೆ, ಇವುಗಳು ತಾಯಂದಿರ ಅಗತ್ಯಗಳನ್ನು ಪೂರೈಸುತ್ತವೆ.

ಪ್ರತಿಕ್ರಿಯಿಸಿ:
**feedback@sudha.co.in**



## ಸಡಿಲ, ಹಗುರ ದಿರಿಸು ಅಗತ್ಯ



ಮೊದಲೆಲ್ಲಾ ಹಾಲುಣಿಸುವ ತಾಯಂದಿರಿಗೆ ಉಡುಪುಗಳಲ್ಲಿ ಅಷ್ಟಾಗಿ ಆಯ್ಕೆಗಳಿರಲಿಲ್ಲ. ಅಲ್ಲದೆ ಫೀಡಿಂಗ್ ಡ್ರೆಸ್ ನೋಡುವುದಕ್ಕೆ ಆಕರ್ಷಕವಾಗಿರುವುದಿಲ್ಲ, ಧರಿಸುವುದಕ್ಕೆ ಆರಾಮದಾಯಕವಲ್ಲ. ಸುಮ್ಮನೆ ದುಡ್ಡು ವೇಸ್ಟ್ ಎಂಬ ಭಾವವಿರುತ್ತದೆ. ಆದರೆ ಈಗ ಕಾಲ ಬದಲಾಗಿದೆ. ಫ್ಯಾಷನ್ ಕೂಡ ದಿನದಿಂದ ದಿನಕ್ಕೆ ಬದಲಾಗುತ್ತಿದೆ. ಆರ್ಗಾನಿಕ್ ಕಾಟನ್, ಬ್ಯಾಂಬೊ, ಮೊದಲ್ ಹಾಗೂ ರೆಯಾನ್, ಲೆನಿನ್ ಇತ್ಯಾದಿ ಮೆಟೀರಿಯಲ್ ಉಪಯೋಗಿಸುತ್ತಾರೆ. ಇದು ಆರಾಮದಾಯಕ ಹಾಗೇ ವಿಭಿನ್ನ ಲುಕ್ ನೀಡುತ್ತದೆ. ಬೊಹಿಮಿನ್ ಹಾಗೂ ಟೈಯರ್ಡ್ ಉಡುಪುಗಳು ಸಡಿಲವಾಗಿರುವುದರ ಜೊತೆಗೆ ಹಾಲುಣಿಸುವ ತಾಯಂದಿರಿಗೆ ಚೆನ್ನಾಗಿರುತ್ತದೆ. ಫ್ಯಾಷನ್ ಪ್ರಿಯರಿಗೂ ಹೇಳಿ ಮಾಡಿಸಿದ್ದು.

ಕಾಟನ್ ಶರ್ಟ್‌ಗಳು ಹಾಗೂ ಕಫ್ತಾನ್‌ಗಳು ಕೂಡ ಫೀಡಿಂಗ್ ಮಾಡುವುದಕ್ಕೆ ಸೂಕ್ತವೆನಿಸುವ ಉಡುಪು. ಈ ದಿರಿಸಿನ ಎದುರು ಭಾಗದಲ್ಲಿ ಬಟನ್ ಅಥವಾ ಟೈ ವೇಸ್ಟ್‌ಗಳು ಹಾಲುಣಿಸುವುದಕ್ಕೆ ಸುಲಭವಾಗುತ್ತದೆ. ಇನ್ನು ಫ್ಯಾಷನಲ್ ಆಗಿರಬೇಕು ಎಂಬುವವರಿಗೆ ಮೆಟರ್ನಿಟಿ ಡೆನಿಮ್ ಹೇಳಿ ಮಾಡಿಸಿದ ದಿರಿಸು.

ದೀಪಶ್ರೀ ಪ್ರಭಾಕರ್, ವಸ್ತ್ರ ವಿನ್ಯಾಸಕಿ